

# ಗುಮ್ಮ ಬಂತು ಗುಮ್ಮ

## ಕಾಲೇಜಲ್ಲಿ ಗೂಬೆ!

ಗೂಬೆ ಮನೆ ಪ್ರವೇಶಿಸಿದರೆ ಅಶುಭ ಎನ್ನುವ ನಂಬಿಕೆಯಿದೆ. ಕಾಲೇಜು ಪ್ರವೇಶಿಸಿದರೆ, ಅದರಲ್ಲೂ ಪ್ರಾಂಶುಪಾಲರ ಕೊಠಡಿಯನ್ನೇ ಪ್ರವೇಶಿಸಿದರೆ?

■ ಗುರುರಾಜ್ ದಾವಣಗೆರೆ

ಅದು ವಾರದ ಮೊದಲ ದಿನ. ಕಾಲೇಜಿನ ಕಾಂಪೌಂಡ್ ದಾಟಿ, ಕಾರ್ ನಿಲ್ಲಿಸಿ ಕ್ಯಾಬಿನ್ ಬಳಿ ಬರುವಷ್ಟರಲ್ಲಿ ಕ್ಯಾಬಿನ್‌ನ ಮುಂದೆ ವಿದ್ಯಾರ್ಥಿಗಳು ಹಾಗೂ ಕಚೇರಿ ಸಹಾಯಕರ ಚಿಕ್ಕ ಗುಂಪೇ ನೆರೆದಿತ್ತು. ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಅಟೆಂಡರ್ ತಾಯಮ್ಮ ಯಾರನ್ನೂ ಒಳಗೆ ಹೋಗದಂತೆ ತಡೆದು ನಿಲ್ಲಿಸಿದ್ದಳು. ಕ್ಯಾಬಿನ್ ಬಾಗಿಲಿನ ಬಳಿ ಬರುತ್ತಿದ್ದಂತೆ 'ಗುಮ್ಮ ಸೇರ್ಕಂಡಿದೆ' ಎಂಬ ಮಾತು ಕೇಳಿಸಿತು.

ಏನಿದು ಗುಮ್ಮ ಎಂಬ ಕುತೂಹಲದಿಂದ ಗುಂಪನ್ನು ಬದಿಗೆ ಸರಿಸಿ, 'ಏನಿದು ತಾಯಮ್ಮ ಇವರೆಲ್ಲ ಯಾಕಿಲ್ಲಿ ನಿಂತಿದ್ದಾರೆ?' ಎಂದೆ. 'ಈಗ್ಲೇ ಒಳೀಕ್ ಓಗಬ್ಯಾಡಿ ಸಾರ್, ನಿಮ್ಮ ರೂಮ್‌ನಾಗೆ ಗುಮ್ಮ ಸೇರ್ಕಂಡದೆ, ಅದನ್ನ ಲಿಂಗಪ್ಪಣ್ಣ ಹೊರೀಕ್ ಓಡಸ್ತಾ ಅವ್ನೆ, ಅಲ್ಲೀಗಂಟ ತಡೀರಿ' ಎಂದು ತಾಯಮ್ಮ ಅಡ್ಡಹಾಕಿದಳು. ಅಚ್ಚರಿಗೊಂಡ ನಾನು ಗೊಂದಲ ಎಬ್ಬಿಸಿದ್ದ ವಿದ್ಯಾರ್ಥಿಗಳನ್ನು ಸುಮ್ಮನಿರಿಸಿ ರೂಮಿನಲ್ಲಿ ಏನು ಸೇರಿಕೊಂಡಿರಬಹುದೆಂದು ನಿಧಾನವಾಗಿ ಆಲಿಸಿದಾಗ ಯಾವುದೋ ಹಕ್ಕಿ ಗಾಬರಿಯಿಂದ ರೆಕ್ಕೆಬಡಿದು ಅತ್ತಿಂದಿತ್ತ ಹಾರುತ್ತಿದೆಯೆನಿಸಿ 'ಯಾವ ಗುಮ್ಮಾನು ಇಲ್ಲ ಬಿಡು ತಾಯಮ್ಮ, ಪಕ್ಷಿ ಬಂದಿರಬಹುದು' ಎಂದು ಅವಳನ್ನು ದಾಟಿಕೊಂಡು ಕ್ಯಾಬಿನ್ ಪ್ರವೇಶಿಸಿದೆ.

ನನ್ನ ಊಹೆ ಸರಿ ಇತ್ತು. ಒಳಗೆ ಸಹಿಸಲಸಾಧ್ಯವಾದ ಕಮಟು ವಾಸನೆ. ರೂಮಿನ ತುಂಬೆಲ್ಲಾ ಹಕ್ಕಿಯ ರೆಕ್ಕೆಯಿಂದ ಉದುರಿದ ಗರಿಗಳು ಮತ್ತು ಅದಕ್ಕೆ ಅಂಟಿಕೊಂಡ ಕ್ರಿಮಿಗಳು ತಲೆಯ ಎತ್ತರಕ್ಕೆ ಹಾರಾಡುತ್ತಿವೆ. ನಡುವೆ ಟವೆಲ್ ಹಿಡಿದು ನಿಂತಿದ್ದ ಗಾರ್ಡನರ್ ಲಿಂಗಪ್ಪಣ್ಣ 'ಉಷ್ಯೂ, ಉಷ್ಯೂ' ಎಂದು ಹಕ್ಕಿಯೊಂದನ್ನು ಓಡಿಸಲು ಅತ್ತಿಂದಿತ್ತ ಟವೆಲ್ ಬೀಸುತ್ತಿದ್ದ. ರೂಮಿಗೆ ಸೇರಿಕೊಂಡಿದ್ದ ಹಕ್ಕಿಯನ್ನು ಓಡಿಸುವ ಭರದಲ್ಲಿ ಕೋಣೆಯ ಲೈಟ್‌ಗಳನ್ನೂ ಆನ್ ಮಾಡಿರಲಿಲ್ಲ. ನನ್ನ ಹಿಂದೆಯೇ ಬಂದಿದ್ದ ಅಟೆಂಡರ್ ಮುರಳಿ ಕೂಡಲೇ ಲೈಟ್ ಹೊತ್ತಿಸಿದ. ಲಿಂಗಪ್ಪಣ್ಣ 'ನೀವ್ಯಾಕ್ ಒಳೀಕ್ ಬಂದ್ರಿ, ಬೆಳ್ ಬೆಳಗ್ಗೆ ಇದನ್ನು